(ತೋಟಗಾರಿಕೆ ಇಲಾಖೆ)

ಸಂಖ್ಯೆ:ತೋಇ:ಆ:ಸಿ:ವಿ3:92:2019-20

ತೋಟಗಾರಿಕೆ ನಿರ್ದೇಶನಾಲಯ,
ಲಾಲ್ ಬಾಗ್, ಬೆಂಗಳೂರು-04,
ದಿನಾಂಕ:-02 -11-2019.

**"ಕಛೇರಿ ಆದೇಶ"**

ವಿಷಯ:-ದ್ವಿತೀಯ ದರ್ಜೆ ಸಹಾಯಕ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.(ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ-H.K.D.B-L.C)

ಉಲ್ಲೇಖ:- ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯ ದಿನಾಂಕ:-23.10.2019.

--*****--

ಉಲ್ಲೇಖದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಅನುಮೋದಿಸಿರುವಂತೆ, ತೋಟಗಾರಿಕೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅರ್ಹ "ದ್ವಿತೀಯ ದರ್ಜೆ ಸಹಾಯಕರು" ಗಳಿಗೆ ಈ ತಕ್ಷಣದಿಂದಲೇ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ.27650-650-29600-750-32600-850-36000-950-39800-1100-46400-1250-52650/-ರಲ್ಲಿ ಗ್ರೂಪ್-"ಸಿ" (ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ-H.K.D.B-L.C) "ಪ್ರಥಮ ದರ್ಜೆ ಸಹಾಯಕ " ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಕಛೇರಿಗಳಿಗೆ ನೇಮಿಸಿ ಈ ಮೂಲಕ ಆದೇಶಿಸಿದೆ.

| ಕ್ರಮ ಸಂಖ್ಯೆ | ಹೆಸರು, ಪದನಾಮ, ಮತ್ತು ಕಾರ್ಯನಿರ್ವಹಿಸುತ್ತಿರುವ ಕಛೇರಿ(ಶ್ರೀ/ಶ್ರೀಮತಿ, ರವರಾದ) | " ಪ್ರಥಮ ದರ್ಜೆ ಸಹಾಯಕ " ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ನೇಮಿಸಲಾದ ಕಛೇರಿ |
|---|---|---|
| 1 | 2 | 3 |
| 1 | ಟಿ.ಹುಲಿಗೇಶ್, ದ್ವಿತೀಯ ದರ್ಜೆ ಸಹಾಯಕರು, (ಪ. ಜಾ) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್)ಹೊಸಪೇಟೆ, ರವರ ಅಧೀನ, | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್)ಹೊಸಪೇಟೆ,ರವರ ಅಧೀನ ಶ್ರೀ.ಎಸ್. ಎಸ್.ಶ್ರೀನಿವಾಸ್, ಪ್ರಥಮ ದರ್ಜೆ ಸಹಾಯಕರು, ರವರ ಮುಂಬಡ್ತಿಯಿಂದ ಬಿಡುಗಡೆಯಾದ ನಂತರ ತೆರವಾಗುವ ಹುದ್ದೆಗೆ) |
| 2 | ಬಾಬು.ಡಿ, ದ್ವಿತೀಯ ದರ್ಜೆ ಸಹಾಯಕರು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್)ಕೊಪ್ಪಳ, ರವರ ಅಧೀನ | ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ)ಕೊಪ್ಪಳ,ರವರ ಅಧೀನ, (ಶ್ರೀಮತಿ. ಸುಧಾ,ಪ್ರಥಮ ದರ್ಜೆ ಸಹಾಯಕರು, ರವರ ಮುಂಬಡ್ತಿಯಿಂದ ಬಿಡುಗಡೆಯಾದ ನಂತರ ತೆರವಾಗುವ ಹುದ್ದೆಗೆ) |

| | | |
|---|---|---|
| 3 | ನಿಖೀಲ್ ಎಂ.ಪಾಟೀಲ್,<br>ದ್ವಿತೀಯ ದರ್ಜೆ ಸಹಾಯಕರು,<br>ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,<br>(ಜಿಲ್ಲಾ ಪಂಚಾಯತ್)ಕಲಬುರಗಿ,ರವರ ಅಧೀನ, | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,<br>(ಜಿಲ್ಲಾ ಪಂಚಾಯತ್)ಕಲಬುರಗಿ, ರವರ ಅಧೀನದಲ್ಲಿನ<br>ಖಾಲಿ ಹುದ್ದೆಗೆ |
| 4 | ವೀರಭದ್ರ ಎಸ್.ಕಮತರ,<br>ದ್ವಿತೀಯ ದರ್ಜೆ ಸಹಾಯಕರು,<br>ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,<br>(ಜಿಲ್ಲಾ ಪಂಚಾಯತ್)ಯಲಬುರ್ಗಾ,ರವರ<br>ಅಧೀನ. | ತೋಟಗಾರಿಕೆ ಉಪ ನಿರ್ದೇಶಕರು<br>(ಜಿಲ್ಲಾ ಪಂಚಾಯತ್)ಕೊಪ್ಪಳ, ರವರ ಅಧೀನದಲ್ಲಿನ<br>ಖಾಲಿ ಹುದ್ದೆಗೆ |

ಸೂಚನೆ:-ಕ್ರಮ ಸಂಖ್ಯೆ:-(1)ಮತ್ತು (2)ರಲ್ಲಿನ ನೌಕರರುಗಳು ಮುಂಬಡ್ತಿ ಹೊಂದಿದ ಹುದ್ದೆಗೆ ಮುಂಬಡ್ತಿ ಹುದ್ದೆಯು ಖಾಲಿಯಾದ ನಂತರ ಕರ್ತವ್ಯದಿಂದ ಬಿಡುಗಡೆಹೊಂದಿ ಹಾಜರಾಗಲು ಅನುಕೂಲವಾಗುವಂತೆ ಸಂಬಂಧಪಟ್ಟ ಅಧಿಕಾರಿಗಳು ಮುಂಬಡ್ತಿ ಹೊಂದಿದ ಅಧಿಕಾರಿ/ನೌಕರರುಗಳನ್ನು ಬಿಡುಗಡೆ ಮಾಡಿ ನೇಮಿಸಿದ ಕಛೇರಿಗೆ ಹಾಜರಾಗಲು ಸೂಚಿಸುವುದು.

ಮುಂದುವರೆದು, ಸರ್ಕಾರದ ಅಧಿಸೂಚನೆ ಸಂಖ್ಯೆ:-ಡಿಪಿಎಆರ್:57:ಎಸ್ ಆರ್ ಆರ್ :2001, ದಿನಾಂಕ:22.05.2002ರ ಪ್ರಕಾರ ಮುಂಬಡ್ತಿ ಆದೇಶ ಹೊರಡಿಸಿದ 15 ದಿವಸದೊಳಗಾಗಿ ಬಡ್ತಿ ಅಂಗೀಕರಿಸಿ ಹಾಜರಾಗಬೇಕು ಇಲ್ಲವೇ ನಿರಾಕರಿಸಿದ ಬಗ್ಗೆ ಲಿಖಿತವಾಗಿ ನಿರ್ದೇಶನಾಲಯಕ್ಕೆ ಸಕಾರಣಗಳೊಂದಿಗೆ ಮನವಿಯನ್ನು ಸಂಬಂಧಿಸಿದ ಬಟವಾಡೆ ಕಛೇರಿಗಳ ಮೂಲಕ ಸಲ್ಲಿಸುವುದು.ನಿಗಧಿತ ಅವಧಿ ನಂತರ ವಿಳಂಬವಾಗಿ ಸ್ವೀಕೃತವಾದ ಮನವಿಗಳನ್ನು ತಿರಸ್ಕರಿಸಲಾಗುವುದು ತಪ್ಪಿದಲ್ಲಿ ನಿಯಮಾನುಸಾರ ಅಧಿಸೂಚನೆಯಲ್ಲಿನ ಸೂಚನೆಗಳಂತೆ ಮುಂದಿನ ಕ್ರಮಕೈಗೊಳ್ಳಲಾಗುವುದು.

ನಿರ್ದೇಶಕರು

2/11/19

02/XI/19

ಪ್ರತಿಗಳನ್ನು:-

1. ಕಛೇರಿ ಆದೇಶ ಪುಸ್ತಕಕ್ಕೆ.
2. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು,ರವರ ಅವಗಾಹನಗೆ.
3. ತೋಟಗಾರಿಕೆ ಜಂಟಿ ನಿರ್ದೇಶಕರು, ವಿಭಾಗೀಯ ಮಟ್ಟದ ಕಛೇರಿ, ದಾವಣಗೆರೆ,(ಬೆಂಗಳೂರು ವಿಭಾಗ) ಮೈಸೂರು / ಬೆಳಗಾವಿ / ಕಲಬುರಗಿ, ರವರ ಮಾಹಿತಿಗಾಗಿ.
4. ಕೇಂದ್ರ ಕಛೇರಿ ಸಹಾಯಕರು, ತೋಟಗಾರಿಕೆ ನಿರ್ದೇಶನಾಲಯ, ಲಾಲ್ ಬಾಗ್, ಬೆಂಗಳೂರು, ರವರ ಮಾಹಿತಿಗಾಗಿ.
5. ಮುಖ್ಯಲೆಕ್ಕಾಧಿಕಾರಿಗಳು, ಲೆಕ್ಕಶಾಖೆ, ಲಾಲ್ ಬಾಗ್, ಬೆಂಗಳೂರು, ರವರ ಮಾಹಿತಿಗಾಗಿ.
6. ಸಂಬಂಧಿಸಿದ ಕಛೇರಿಗಳಿಗೆ (ಕಾಲಂ 2-3 ರಲ್ಲಿ ನಮೂದಿಸಿದೆ)ಸೂಕ್ತ ಮಾರ್ಗದಲ್ಲಿ.
7. ವ್ಯವಸ್ಥಾಪಕರು (ಆಡಳಿತ) ಲಾಲ್ ಬಾಗ್, ಬೆಂಗಳೂರು, ರವರ ಮಾಹಿತಿಗಾಗಿ.
8. ಅಧೀಕ್ಷಕರು , ನಗದುಶಾಖೆ /ಹೆಚ್.ಆರ್.ಎಂ. ಎಸ್. ವಿಭಾಗ, ಲಾಲ್ ಬಾಗ್, ಬೆಂಗಳೂರು, ರವರ ಮಾಹಿತಿಗಾಗಿ.
9. ಸಂಬಂಧಪಟ್ಟ ನೌಕರರುಗಳಿಗೆ ಸೂಕ್ತ ಮಾರ್ಗದಲ್ಲಿ.
10. ಕಛೇರಿ /ಹೆಚ್ಚುವರಿ ಪ್ರತಿ.

**"ಈ ಕಛೇರಿ ಆದೇಶವು :- https://horticulture.karnataka.gov.in ನಲ್ಲಿ ಲಭ್ಯವಿರುತ್ತದೆ."**